**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 831/2014

**ಸಿ ಡಬ್ಲೂ -8**

**ಪಿ ಡಬ್ಲೂ -6**

| | |
|---|---|
| **ಸಾಕ್ಷಿಯ ಹೆಸರು -** | **ಎಂ ಕೆ ಹಿರೇ ಹಾಳ್** |
| **ತಂದೆಯ ಹೆಸರು -** | **ಎಂ ಎಂ ಹಿರೇಹಾಳ್** |
| **ವಯಸ್ಸು -** | **49 ವರ್ಷಗಳು** |
| **ಉದ್ಯೋಗ -** | **ಸಹಾಯಕ ಮುಖ್ಯ ವ್ಯವಸ್ಥಾಪಕರು, .ಐ.ಡಿ.ಬಿ.ಆಯ್ ಬೆಂಗಳೂರು** |
| **ವಾಸಸ್ಥಳ -** | **ಬೆಂಗಳೂರು** |

**ಸಾಕ್ಷಿಯನ್ನು ದಿನಾಂಕಃ** 27-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

**2011** ರಿಂದ **2014** ರವರೆಗೆ ಹೊಸಪೇಟೆಯ ಐ.ಡಿ.ಬಿ.ಆಯ್ ಬ್ಯಾಂಕ್ ನಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **02-03-2013** ರಂದು ನಮ್ಮ ಶಾಖೆಯ ಕ್ಲಿಯರಿಂಗ್ ವಿಭಾಗಕ್ಕೆ ಹೊಸಪೇಟೆಯ ಎಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಎಸ್ಸಾರ್ ಟ್ರೆಡಿಂಗ್ ಕಾರ್ಪೊರೇಷನ್ ಹೆಸರಿನಲ್ಲಿದ್ದ ಚೆಕ್ ಒಂದು ಪಾವತಿಗಾಗಿ ಬಂದಿತ್ತು. ನಾನು ಆದಿನ ಕಂಪ್ಲಿ ಪಟ್ಟಣಕ್ಕೆ ಕೆಲಸದ ಮೇಲೆ ಹೋಗಿದ್ದೆ. ನನಗೆ ನಮ್ಮ ಬ್ಯಾಂಕಿನ ಕಲ್ಕತ್ತಾ ಶಾಖೆಯಿಂದ ಕರೆಯೊಂದು ಬಂದಿತು. ಸದರಿಯವರು ಚೆಕ್ ಅನ್ನು ಟವರ್ಸ್ ಪ್ರೆವೆಟ್ ಲಿಮಿಟೆಡ್ ರವರು ನೀಡಿಲ್ಲ ಆದ್ದರಿಂದ ಆ ಚೆಕ್ ಅನ್ನು ಕ್ಲಿಯರ್ ಮಾಡಬೇಡಿ ಎಂದು ಸೂಚನೆ ನೀಡಿದ್ದರು. ನಾನು ಚಾಸಾ **-4** ರವರಿಗೆ ಕರೆ ಮಾಡಿ ತಕ್ಷಣ ಎಚ್.ಡಿ.ಎಫ್.ಸಿ ಬ್ಯಾಂಕಿಗೆ ಮಾಹಿತಿ ನೀಡಿ ಚೆಕ್ ನ ಮೂಲಕ ಪಾವತಿ ಆದ ಹಣವನ್ನು ಗ್ರಾಹಕರಿಗೆ ನೀಡದಂತೆ ಸೂಚನೆ ನೀಡಿ ಎಂದು

ತಿಳಿಸಿದ್ದೆ. ಸದರಿ ಹಣವನ್ನು ಎಚ್.ಡಿ.ಎಫ್.ಸಿ ಗ್ರಾಹಕರ ಖಾತೆಯಿಂದ ನಮ್ಮ ಗ್ರಾಹಕರ ಖಾತೆಗೆ ಮರಳಿ ಪಡೆಯುವಂತೆ ಸೂಚನೆ ನೀಡಿದ್ದೆ. ಅದೇ ದಿನ ನಮ್ಮ ಬ್ಯಾಂಕಿನ ಗ್ರಾಹಕರ ಖಾತೆಗೆ ಸದರಿ ಹಣ ಮರುಪಾವತಿಯಾಗಿತ್ತು.

ಪೋಲಿಸರು ಘಟನೆಯಾಗಿ **2-3** ತಿಂಗಳ ನಂತರ ನಮ್ಮ ಶಾಖೆಗೆ ಬಂದು ನಾನು, ಚಾಸಾ **-4** ಮತ್ತು **5** ರವರು ಕಚೇರಿಯಲ್ಲಿದ್ದಾಗ ನಮ್ಮ ಸಮಕ್ಷಮ ಪ್ರಕರಣದಲ್ಲಿನ ಚೆಕ್ ಸಂಖ್ಯೆ **157198** ಅನ್ನು ಜಪ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ನಿಪಿಃ **1** ರ ಪಂಚನಾಮೆಯಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ **1**(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **2** ರ ಚೆಕ್ ನೋಡಿ ಗುರುತಿಸಿರುತ್ತಾರೆ.

## <u>ಪಾಟೀ ಸವಾಲು ಆರೋಪಿ ಪರ ಶ್ರೀ ವಾಯ್.ಎಂ.ಎಂ ವಕೀಲರಿಂದಃ</u>

ನಾನು ಕಂಪ್ಲಿ ಪಟ್ಟಣದಿಂದ ದಿಃ **02-03-2013** ರಂದು ಮಧ್ಯಾಹ್ನ **2.30** ಗಂಟೆಗೆ ನಮ್ಮ ಕಚೇರಿಗೆ ಹಿಂತಿರುಗಿದ್ದೆ. ಶನಿವಾರದಂದು ಬ್ಯಾಂಕ್‌ಗಳು **12.30** ಗಂಟೆಗೆ ಮುಚ್ಚುತ್ತವೆ ಅಂದರೆ ಸರಿ. ಆ ದಿನ **12.30** ಗಂಟೆಗೆ ಬ್ಯಾಂಕಿನ ವ್ಯವಹಾರಗಳು ನಿಂತಿದ್ದವು ಅಂದರೆ ಸರಿ. ಆ ದಿನ ಎನೆಲ್ಲಾ ವ್ಯವಹಾರಗಳು ಆಗಿದ್ದವು ಎಂದು ವಯಕ್ತಿಕವಾಗಿ ನನಗೆ ಮಾಹಿತಿ ಇಲ್ಲ ಅಂದರೆ ಸರಿ. ಕೋಲ್ಕತ್ತಾ ಬ್ಯಾಂಕಿನವರು ನನಗೆ ಮತ್ತು ಚಾಸಾ **-4** ರವರಿಗೆ ಕರೆ ಮಾಡಿ ಹಣಪಾವತಿ ಮಾಡದಂತೆ ತಿಳಿಸಿದ್ದರು. ಸದರಿ ಕರೆ ಬಂದಿದ್ದ ಫೋನ್ ನಂಬರ್ ನನಗೆ ನೆನಪಿಲ್ಲ. ಪೋಲಿಸರಿಗೆ ಸದರಿ ನಂಬರ್ ಅನ್ನು ನಾನು ಕೊಟ್ಟಿಲ್ಲ.

ಮೆಲ್ನೋಟಕ್ಕೆ ನಿಪಿಃ **2** ರ ಚೆಕ್ ತಿದ್ದುಪಡಿ ಆದಂತೆ ಕಂಡು ಬರುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಆ ಬಗ್ಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. ಪ್ರಕರಣದಲ್ಲಿನ ನನಗೆ ಯಾವುದೇ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಾನು ನಿಪಿಃ **1** ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ **-4** ಮತ್ತು **5** ನನ್ನ ಅಧೀನ ಅಧಿಕಾರಿಗಳು ಅಂದರೆ ಸರಿ. ಸದರಿಯವರು ಬ್ಯಾಂಕಿನ ವ್ಯವಹಾರಗಳನ್ನು ಬಿಟ್ಟು ಬೇರೆ ಕೆಲಸಗಳನ್ನು ಬ್ಯಾಂಕ್ ಅವಧಿಯಲ್ಲಿ ಮಾಡಲು ನನ್ನ ಅನುಮತಿ ಪಡೆಯಬೇಕಾಗುತ್ತದೆ ಅಂದರೆ ಸರಿ. ಚಾಸಾ **-4** ಮತ್ತು **5** ರವರಿಗೆ ಪಂಚನಾಮಯಲ್ಲಿ ಭಾಗವಹಿಸುವಂತೆ ಲಿಖಿತವಾಗಿ ನಾನು ಆದೇಶಿಸಿರಲಿಲ್ಲ. ನಾನು ಮತ್ತು ನನ್ನ ಬ್ಯಾಂಕ್ ಸಿಬ್ಬಂದಿಯವರು ಪೋಲಿಸರ ಮಾತು ಕೇಳಿ ಠಾಣೆಯಲ್ಲಿಯೇ ಪಂಚನಾಮೆಗೆ ಸಹಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಚೆಕ್ ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.